# ‘ಪಕ್ಷ ಯಾವುದಾದರೂ ಆಗಿರಲಿ, ಕಿಸಾನ್ ಅಜೆಂಡಾ ಎಲ್ಲರದಾಗಲಿ...

ದೇಶವ್ಯಾಪಿ ಸಂಘಟನೆಗೊಳ್ಳುತ್ತಿರುವ ‘ರೈತ ಚಳವಳಿ’ಯ ತಾತ್ವಿಕತೆಯನ್ನು ರೂಪಿಸುತ್ತಿರುವವರಲ್ಲಿ ಯೋಗೇಂದ್ರ ಯಾದವ್ ಪ್ರಮುಖರು. ‘ಸ್ವರಾಜ್ ಇಂಡಿಯಾ’ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹಾಗೂ ‘ಸಂಯುಕ್ತ ಕಿಸಾನ್ ಮೋರ್ಚಾ’ದ ಸಂಚಾಲನಾ ಸಮಿತಿ ಸದಸ್ಯರಾಗಿರುವ ಅವರು, ‘ಎಂಎಸ್‌ಪಿ ದಿಲಾವ್’ ಚಳವಳಿ ಸಂಘಟನೆ ಹಿನ್ನೆಲೆಯಲ್ಲಿ ಇತ್ತೀಚೆಗೆ ಕರ್ನಾಟಕಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಅವರೊಂದಿಗೆ ‘ಸುಧಾ’ ನಡೆಸಿದ ಮಾತುಕತೆ ಇಲ್ಲಿದೆ.

■ ರಾಘವೇಂದ್ರ ಕೆ. ತೊಗರ್ಸಿ



◆ **ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ (ಎಂಎಸ್‌ಪಿ ದಿಲಾವ್) ಕರ್ನಾಟಕದಲ್ಲಿ ಆಂದೋಲನ ನಡೆಸುತ್ತಿದ್ದೀರಿ. ದೇಶದಲ್ಲಿ ರೈತರ ಇತ್ತೀಚಿನ ಹೋರಾಟದ ಸ್ಥಿತಿ ನೋಡಿದರೆ ‘ಎಂಎಸ್‌ಪಿ ದಿಲಾವ್’ ಯಶಸ್ವಿಯಾಗುತ್ತದೆ ಅನ್ನಿಸುತ್ತಾ?**

ರೈತರ ಬೇಡಿಕೆಗಳಿಗೆ ಇದುವರೆಗಿನ ಯಾವುದೇ ಸರ್ಕಾರ ಮನ್ನಣೆ ನೀಡಿಲ್ಲ. ಸರ್ಕಾರಗಳು ಎಲ್ಲಾ ಕಾಲದಲ್ಲೂ ರೈತರ ಸದ್ದನ್ನು ಅಡಗಿಸುತ್ತಲೇ ಬಂದಿವೆ. ಆದರೆ, ಈ ನಮ್ಮ ಆಂದೋಲನ ಯಶಸ್ವಿ ಆಗುತ್ತದೆ ಎನ್ನುವ ವಿಶ್ವಾಸ ನಮಗಿದೆ. ಈ ವಿಷಯದಲ್ಲಿ ಪ್ರಧಾನಮಂತ್ರಿ ನಮಗೆ ತುಂಬ ಸಹಾಯ ಮಾಡಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಎಂಎಸ್‌ಪಿ ಇತ್ತು– ಇದೆ– ಇರುತ್ತೆ (ಎಂಎಸ್‌ಪಿ ಥಿ– ಹೈ– ರಹೇಂಗಿ) ಎಂದಿದ್ದಾರೆ. ಇದು ಅನೇಕ ಜನರ ಕಣ್ಣನ್ನು ತೆರೆಸಿದೆ. ಈ ಕಾರಣಕ್ಕೆ ಅವರಿಗೆ ಕೃತಜ್ಞತೆಯನ್ನು ಹೇಳಬಯಸುತ್ತೇನೆ. ಏಕೆಂದರೆ, ಎಂಎಸ್‌ಪಿ ಎಂದರೆ ತುಂಬ ಜನರಿಗೆ ಗೊತ್ತೇ ಇಲ್ಲ. ಎಂಎಸ್‌ಪಿ ಕರ್ನಾಟಕದಲ್ಲಿಯೇ ಸಂಪೂರ್ಣ ಜಾರಿಯಾಗಿಲ್ಲ. ವೈಜ್ಞಾನಿಕ ಬೆಲೆ ಎಲ್ಲ ಬೆಳೆಗೂ ನಿಗದಿ ಆಗಬೇಕು. ಪ್ರಧಾನಿಯ ಕೃಪೆಯಿಂದಾಗಿ ದೇಶವ್ಯಾಪಿ ರೈತರಿಗೆ ‘ಕನಿಷ್ಠ ಬೆಂಬಲ ಬೆಲೆ’ ಎಂದರೆ ಏನು ಎನ್ನುವುದು ಗೊತ್ತಾಗಿದೆ. ಎಂಎಸ್‌ಪಿ ನೀಡಿದ್ದೇ ಆದರೆ ದೇಶದ ರೈತರ ಸಂಕಷ್ಟ ಬಹುತೇಕ ದೂರವಾಗುತ್ತದೆ.

◆ **‘ಜನ ಚಳವಳಿ’ ಮೂಲಕವೇ ಬ್ರಿಟೀಶ್ ಆಡಳಿತ ವ್ಯವಸ್ಥೆಯನ್ನು ಅಂತ್ಯಗೊಳಿಸಿದ ಚರಿತ್ರೆಯನ್ನು ಹೊಂದಿರುವ ದೇಶದಲ್ಲಿ ಇಂದು ಚಳವಳಿ ತನ್ನ ಶಕ್ತಿಯನ್ನು ಕಳೆದುಕೊಂಡಿದೆ ಅನ್ನಿಸುವುದಿಲ್ಲವೇ?**

ಖಂಡಿತ. ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಕೃಷಿ ಸಂಬಂಧಿ ಹೊಸ ನೀತಿಯ ವಿರುದ್ಧ ರೈತರು ನೂರು ದಿನಗಳಿಂದ ಹೋರಾಟ